**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. :110 ಫ್ರಾ.ಸಾ. : 46**

ಸಾಕ್ಷಿಯ ಹೆಸರು : ಸುರೇಶ್ ಮಾತ್ಯಾ ಬೋರಕರ್

ತಂದೆಯ ಹೆಸರು : ಮಾತ್ಯಾ ಬೋರಕರ್

ವಯಸ್ಸು : 60 ವರ್ಷ

ಉದ್ಯೋಗ : ಕೂಲಿ ಕೆಲಸ.

ವಾಸ : ಕಾನಗೋಡು, ಸಿದ್ದಾಪುರ.

**ದಿನಾಂಕಃ 26-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು 35-40 ವರ್ಷಗಳಿಂದ ಕಾನಗೋಡು ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನನಗೆ ಅಲ್ಲಿ ಸ್ವಂತ ಮನೆ ಇದೆ. 2001-02 ರಲ್ಲಿ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಕಾನಗೋಡು ಗ್ರಾಮ ಪಂಚಾಯತಿಗೆ ಶೌಚಾಲಯ ನಿರ್ಮಿಸಲು ರೂ.20 ಲಕ್ಷ ಮಂಜೂರು ಆಗಿತ್ತು ಮತ್ತು 210 ಫಲಾನುಭವಿಗಳು ಆಯ್ಕೆ ಆಗಿದ್ದರು ಮತ್ತು ನಾನು ಫಲಾನುಭವಿಯಾಗಿ ಆಯ್ಕೆ ಆಗಿದ್ದೆ ಎಂಬುದು ನನಗೆ ಗೊತ್ತಿಲ್ಲ. ನನಗೆ ಶೌಚಾಲಯ ನಿರ್ಮಿಸಿಕೊಳ್ಳಲು ರೂ.3000/- ಸಹಾಯಧನವನ್ನು ಗ್ರಾಮ ಪಂಚಾಯತಿಯಿಂದ ನೀಡಿಲ್ಲ. ನನಗೆ ಶೌಚಾಲಯವನ್ನು ಸಹ ನಿರ್ಮಿಸಿಕೊಟ್ಟಿಲ್ಲ. ನನಗೆ ಆರೋಪಿಯ ಪರಿಚಯ ಇದೆ. ಈ ದಿನ ಆರೋಪಿ ಗೈರು ಹಾಜರು ಇದ್ದಾನೆ, ಅವನು ನಮ್ಮ ಊರಿನವರು ಆಗಿದ್ದಾನೆ. ಆರೋಪಿ ಪಂಚಾಯತಿ ಅಧ್ಯಕ್ಷ ಆಗಿದ್ದರು. ನಾನು ಪೊಲೀಸನವರ ಮುಂದೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ-**

2. ನಾನು ನಿಪಿ-80 ರ ಪ್ರಕಾರ ಕರ್ನಾಟಕ ಲೋಕಾಯುಕ್ತ ಕಾರವಾರದ ಆರಕ್ಷಕ ನಿರೀಕ್ಷಕರು ದಿನಾಂಕ 14.09.2005 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು

ಫಲಾನುಭಯಾಗಿ ಆಯ್ಕೆ ಮಾಡಿದ್ದರು ಮತ್ತು ಸಹಾಯಧನ ನನಗೆ ಕೊಟ್ಟಿಲ್ಲ ಎಂದು ನಾನು ಹೇಳಿಕೆ ನೀಡಿಲ್ಲ. ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಕಾನಗೋಡು ಗ್ರಾಮದಲ್ಲಿ ಕಾಮಗಾರಿ ಕೈಗೊಳ್ಳಲು ರೂ.20 ಲಕ್ಷ ಸರ್ಕಾರದಿಂದ ಮಂಜೂರು ಆಗಿತ್ತು ಮತ್ತು ನಮ್ಮ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 210 ಫಲಾನುಭವಿಗಳಿಗೆ ಶೌಚಾಲಯ ಕಟ್ಟಲು ಮಂಜೂರಿ ಆಗಿತ್ತು ಎಂದು ನನಗೆ ತಿಳಿಯಿತು ಎಂದು ಹೇಳಿಕೆಯನ್ನು ಕೊಟ್ಟಿಲ್ಲ. ಆರೋಪಿ ನನಗೆ ಪರಿಚಯದವನು ಆಗಿದ್ದರಿಂದ ಮತ್ತು ನನ್ನ ಊರಿನವರು ಆಗಿದ್ದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

3. ನಾನು ಶೌಚಾಲಯ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಹಾಗಿದ್ದರೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ